ಗೋರಕ್ಷಣಿ
GORAKSHANA

12 ನೇ ವರ್ಷ 1962 ನೇ ಏಪ್ರಿಲ್ ತಾ|| 27 Apr 62

Help The 'Gorakshana'

Advertise in Goraksana and help the pious cause

"ಗೋರಕ್ಷಣ" ಪತ್ರಿಕೆಗೆ ಬೆಂಬಲಿಗರಾಗಿರಿ

ಗೋರಕ್ಷಣೆ, ಪಶುಪಾಲನೆ, ಪಶುವೈದ್ಯ, ಶಾಕಾಹಾರ ವಿಚಾರಗಳಿಂದ ಕೂಡಿದ ಏಕೈಕ ಕನ್ನಡ ಪತ್ರಿಕೆ.

ಗೋರಕ್ಷಣ ಪತ್ರಿಕೆಗೆ ಸಹಾಯಾರ್ಥವಾಗಿ ಮತ್ತು ಪ್ರಕಟಿಸಲು ಅನುಕೂಲವಾದ ಲೇಖನಗಳನ್ನೂ ವಾರ್ತೆಗಳನ್ನೂ ವಂದನಾಪೂರ್ವಕವಾಗಿ ಸ್ವೀಕರಿಸಲಾಗುವುದು

ವಿಳಾಸ – ಗೋರಕ್ಷಣ ಆಫೀಸ್, ಚಾಮರಾಜಪುರಂ, ಮೈಸೂರು

ನಾಗರಹಾವು ಶ್ರೀಮದ್ಭಾಗವತವನ್ನು ಕೇಳಿತು

ಕಳೆದ ೧೯೬೧ ನೆಯ ಇಸ್ವಿ ಡಿಸೆಂಬರ್ ೨೧ ನೆಯ ತಾರೀಖಿನ ದಿನ ನಡೆದ ಸುದ್ದಿ. ಅಲಹಾಬಾದಿನಿಂದ ೪೨ ಮೈಲು ದೂರದಲ್ಲಿ ಕೆಸರಿಯಾ ಎಂಬ ಗ್ರಾಮವಿದೆ; ಅಲ್ಲಿಯ ಜನಗಳು ಒಂದು ಕಡೆ ಸೇರಿ ಶ್ರೀಮದ್ಭಾಗವತವನ್ನು ಪಾರಾಯಣ ಮಾಡುತ್ತಾ ಇದ್ದರು; ಅಲ್ಲಿಂದ ಒಂದು ಫರ್ಲಾಂಗಿನಷ್ಟು ದೂರದಲ್ಲಿರುವ ಹೊಲದಿಂದ ಒಂದು ನಾಗರಹಾವು ಹೊಂಟು ಭಾಗವತ ಪಾರಾಯಣ ನಡೆಯುವ ಸ್ಥಳಕ್ಕೆ ಓಡಿ ಬಂದಿತು; ಎಲ್ಲರಿಗೂ ಹೆದರಿಕೆಯಾಯಿತು; ಕೆಲವರು ಆ ಹಾವನ್ನು ಹೊಡೆದು ಕೊಲ್ಲಲು ಸಿದ್ಧರಾದರು; ಆದರೆ ಅಲ್ಲಿ ಭಾಗವತ ಪಾರಾಯಣ ಮಾಡುತ್ತಿರುವ ಬ್ರಾಹ್ಮಣರು ಅದಕ್ಕೆ ಅವಕಾಶಕೊಡಲಿಲ್ಲ, ತಡೆದರು; ಆದ್ದರಿಂದ ಆ ಹಾವನ್ನು ಕೊಲ್ಲಲಿಲ್ಲ: ಅದು ಸ್ವಲ್ಪ ದೂರದಲ್ಲಿ ಒಂದು ಕಡೆ ಸ್ವಸ್ಥವಾಗಿ ಇದ್ದುಬಿಟ್ಟಿತು: ಅದನ್ನು ನೋಡಿ ಭಾಗವತ ಪಠನ ಮಾಡುತ್ತಿರುವ ಬ್ರಾಹ್ಮಣರು ಸ್ವಲ್ಪ ಹೊತ್ತಿನ ಬಳಿಕ ಆ ಸರ್ಪವನ್ನು ಕುರಿತು 'ನಿನಗೆ ಶ್ರೀಮದ್ಭಾಗವತ ಪಠನವನ್ನು ಕೇಳಬೇಕೆಂದಿದ್ದರೆ ಸಭೆಯಲ್ಲಿ ಬಂದು ಕುಳಿತುಕೋ, ದೂರದಲ್ಲಿ ಏಕೆ ಇದ್ದೀಯಾ' ಎಂದು ಹೇಳಿದರು: ಆ ಮಾತುಗಳನ್ನು ಕೇಳಿದ ಕೂಡಲೇ ಸರ್ಪವು ತಾನು ಇದ್ದಲ್ಲಿಂದ ಹೊಂಟು ಸಭೆಯಲ್ಲಿ ಒಂದು ಕಡೆ ಬಂದು ಕೂಡಿತು, ಮತ್ತು ಭಾಗವತ ಪಠನವನ್ನು ಕೇಳತೊಡಗಿತು; ಎಳು ದಿನಗಳವರೆಗೆ ಅಂದರೆ ಭಾಗವತ ಸಪ್ತಾಹವು ಮುಗಿಯುವವರೆಗೆ ಭಾಗವತವನ್ನು ಕೇಳುತ್ತಾ ಇದ್ದಬಿಟ್ಟಿತು;; ತಾ|| ೨೮-೧೨-೧೯೬೧ ನೆಯ ದಿನ ಭಾಗವತ ಸಪ್ತಾಹವು ಮುಗಿದು, ಪರೀಕ್ಷಿತ ರಾಜನ ಕಥೆಯು ಮುಗಿದಬಳಿಕ ಎಲ್ಲರೂ 'ಶ್ರೀಕೃಷ್ಣ ಭಗವಾನಕೀ ಜೈ' ಎಂದು ಘೋಷಿಸಿದಾಗ, ಆ ನಾಗರಹಾವು ತನ್ನ ಪ್ರಾಣವನ್ನು ಬಿಟ್ಟು ದಿವಂಗತವಾಯಿತು. ಜನಗಳು ಪ್ರತಿದಿನವೂ ಆ ಹಾವಿಗೆ ಹುಡಿಯಲು ಹಾಲು ಕೊಡುತ್ತಿದ್ದರು; ಅದು ರಾತ್ರೆ ಹೊತ್ತು ಅಲ್ಲಿಯೇ ಬೌಕಿನು ಕೆಳಗೆ ಮಲಗುತ್ತಿತ್ತು.

'ಕಲ್ಯಾಣ' ದಿಂದ

ಆರ್ಥಿಕ ಸ್ಥಿತಿ ಉತ್ತಮಗೊಳಿಸುವ ಹಾದಿ

ರೆವಿನ್ಯೂ ಮಂತ್ರಿ ಕೃಷ್ಣಪ್ಪನವರ ಅಮೋಘ ಭಾಷಣ

ಪಶುಗಳನ್ನು ಚೆನ್ನಾಗಿ ಸಾಕಿದರೆ ವ್ಯವಸಾಯಕ್ಕೆ ಬೇಕಾದಷ್ಟು ಗೊಬ್ಬರ ಕುಟುಂಬ ವರ್ಗಕ್ಕೆ ಬೇಕಾದಷ್ಟು ಹಾಲು ಹೊಂದಿ ರೈತರು ಸುಖದಿಂದರಬಹುದು ಎಂದು ರಾಜ್ಯ ಸರ್ಕಾರದ ಕಂದಾಯ ಮಂತ್ರಿಗಳಾದ ಶ್ರೀ ಎಂ. ವಿ. ಕೃಷ್ಣಪ್ಪನವರು 24 ನೆಯ ತಾ|| ಕೋಲಾರ ಜಿಲ್ಲೆ ಶಿಡ್ಲಘಟ್ಟ ತಾಲ್ಲೂಕು ಮೇಲೂರು ಗ್ರಾಮದಲ್ಲಿ ಶ್ರೀ ಗಂಗಾದೇವಿ ಜಾತ್ರೆಯ ಅಂಗವಾಗಿ ಏರ್ಪಡಿಸಿದ್ದ ದನಗಳ ಪ್ರದರ್ಶನದಲ್ಲಿ ಉತ್ತಮ ರಾಸುಗಳ ಮಾಲೀಕರಿಗೆ ಬಹುಮಾನ ಪತ್ರ ಪ್ರಶಸ್ತಿ ಪತ್ರಗಳನ್ನು ವಿನಿಯೋಗಿಸುವ ಸಂದರ್ಭದಲ್ಲಿ ತಿಳಿಸಿದರು. 1 ಹಸು ಅಮೆರಿಕಾ, ಇಂಗ್ಲೆಂಡ್ ಮುಂತಾದ ಪಾಶ್ಚಿಮಾತ್ಯ ದೇಶಗಳಲ್ಲಿ ಒಂದು ದಿನಕ್ಕೆ 30 ಸೇರು ಹಾಲು ಕೊಡುವದರಿಂದ ತಾವೂ ಉಂಡಿದು ಮಿಕ್ಕಿದ್ದನ್ನು ಮಾರಿ ಹಣ ಗಳಿಸುತ್ತಾರೆ ಎಂದವರು ತಿಳಿಸಿ, ಅದಂತೆ ನಮ್ಮ ರೈತರೂ ವಹಿವಾಟುಗಳಿಂದ ಅನೇಕ ಅನುಕೂಲತೆಗಳನ್ನು ಹೊಂದಿ, ಚೆನ್ನಾಗಿ ಬದುಕಬಹುದು ಎಂದರು. ಯಾವ ಉತ್ಪಾದನೆಗೂ ಅನವಕಾಶ ಕೊಡದೆ ಇರುವ ಮಹಿಳೆಯರಿಂದ ಅಭಿಪ್ರಾಣಗಳನ್ನು ಪಾರಿ, ಒಳ್ಳೆಯ ತಳಿ ಹಸುಗಳನ್ನು ಸಾಕಿ ಸಂಪತ್ತಾಗುವ ಸುಖ ಹೊಂದಲು ಪ್ರಯತ್ನಿಸಿ ಎಂದು ಅವರು ತಿಳಿಸಿದರು

ಹಸುಗಳಿಗೆ ಸಾಕಷ್ಟು ಮೇವು ದೊರಕಬೇಕು ಎಂದು ಅವರು ಸೂಚಿಸಿದರು. ಕೆರೆ ಅಂಗಳಗಳಲ್ಲಿ ಮತ್ತು ಬತ್ತಿಹೋದ ಕೆರೆಗಳಲ್ಲಿ ಹುಲ್ಲು ಬೆಳೆಸಲು ಯೋಚಿಸಿದೆ ಎಂದು ಅವರು ತಿಳಿಸಿದರು ಹೊಟ್ಟೆಗಿಲ್ಲದ ಹಸುಗಳನ್ನು ಎಷ್ಟು ಪೂಜಿಸಿದರೂ ಪುಣ್ಯಬಾರದು ಎಂದರು.

ಭಾರತೀಯರಿಗೆ ಗೋಸಂರಕ್ಷಣೆಯು ಕರ್ತವ್ಯವು

[ಲೇಖಕರು : ವಿದ್ಯಾಭೂಷಣ ಪಂ|| ಕೆ ಪಿ ಪುರಾಣಿಕ್ ವರು]

ಗೋಸಂರಕ್ಷಣೆಯಾಗಬೇಕು, ಗೋ ಸಂತತ್ತು ಬೆಳೆಯಬೇಕು ಎಂದು ಮುಂತಾಗಿ ಪ್ರಾಚೀನ ಗ್ರಂಥಗಳಲ್ಲಿಯೂ ಹೇಳಿವೆ. ಭಾರತೀಯ ಮಹಾವ್ಯಕ್ತಿಗಳೆಲ್ಲರೂ ಹೇಳಿದ್ದಾರೆ ಅಪಿಲ ಭಾರತ ರಾಷ್ಟ್ರೀಯ ಕಾಂಗ್ರೆಸ್, ಹಿಂದೂಮಹಾಸಭೆ, ಧರ್ಮೋದ್ಧಾರಿಣಿ ಸಭೆ ಇತ್ಯಾದಿ ಸಂಸ್ಥೆಗಳವರೂ ಗೋವಧೆಯನ್ನು ನಿಷೇಧಿಸಿ ನಿರ್ಣಯ ಮಾಡಿ ಸರ್ಕಾರದವರಿಗೆ ತಿಳಿಸುತ್ತಾರೆ. ಈಗಲೂ ರಾಷ್ಟ್ರೀಯ ಮಹಾಖಂಡರೆಲ್ಲರೂ ವೇದಿಕೆಯ ಮೇಲೆ ನಿಂತು ಗೋರಕ್ಷಣೆ, ಗೋವಧೆಯ ಪ್ರತಿಬಂಧಕಗಳ ವಿಷಯವಾಗಿ ಮನಃಪೂರ್ವಕವಾಗಿ ಭಾಷಣಮಾಡುತ್ತಾರೆ ಇಷ್ಟೆಲ್ಲವೂ ಇದ್ದರೂ ಕೂಡ ಸಂಪೂರ್ಣವಾಗಿ ಗೋವಧೆಯನ್ನು ನಿಷೇಧಿಸುವ ಕಾನೂನು ಹುಟ್ಟಿಲ್ಲ ಮಾತನಾಡುವುದೇ ಒಂದು ನಡೆಯಬೇಕಾಗಿರುವುದೇ ಇನ್ನೊಂದು ಆಗಿರುವದು ದೇಶದ ದುರ್ದೈವ.

ಮಹಾತ್ಮಾಗಾಂಧಿಯವರ ಉದ್ದೇಶ ಹಾಗಿತ್ತು, ಹೀಗಿತ್ತು ಕೆಲವು ವಿಷಯಗಳನ್ನು ಮುಖಂಡರು ಭಾಷಣಗಳಲ್ಲಿಯೂ ಪತ್ರಿಕೆಗಳಲ್ಲಿಯೂ ಉಲ್ಲೇಖಿಸುವುದಕ್ಕಿಂತ ಗೋವಧೆಯ ವಿಷಯದಲ್ಲಿ ಮಹಾತ್ಮಾಜೀಯವರು ವಿರೋಧಿಯಾಗಿದ್ದರೇ? ಮಹಾತ್ಮಾಜಿಯವರು ಏನು ಹೇಳಿದರು?:

"ಗೋವಧೆಯೂ ಮನುಷ್ಯನ ವಧೆಯೂ ಒಂದೇ ಸಮಾನವಾದುದು ಗೋವಧೆಯನ್ನು ನಿಲ್ಲಿಸುವದನು ನಾನು ಸ್ವರಾಜ್ಯಕ್ಕಿಂತಲೂ ದೊಡ್ಡದೆಂದು ತಿಳಿದಿದ್ದೇನೆ"

"ಭರತಖಂಡದಲ್ಲಿ ಗೋಸಂರಕ್ಷಣೆಯ ವಿಷಯವು ಸ್ವರಾಜ್ಯಕ್ಕಿಂತ ಯಾವ ವಿಧದಲ್ಲಿಯೂ ಕಡಿಮೆಯಲ್ಲದಲ್ಲ. ಆದನ್ನು ಸ್ವರಾಜ್ಯಕ್ಕಿಂತಲೂ ವಿಶಿಷ್ಟವಾದುದೆಂದು ತಿಳಿದಿದ್ದೇನೆ ನಾವು ಗೋವುಗಳನ್ನು ರಕ್ಷಿಸಲು ಎಲ್ಲಿಯವರೆಗೆ ಉಪಾಯವನ್ನು ಹುಡುಕುವುದಿಲ್ಲವೋ ಅಲ್ಲಿಯವರೆಗೆ ಸ್ವರಾಜ್ಯ ಶಬ್ದವು ಅರ್ಥಹೀನವಾಗಿರುವುದು"

"ದೇಶದ ಸುಖಸಮೃದ್ಧಿಗಳು ಗೋಸಂತಾನದ ಅಭಿವೃದ್ಧಿಯ ಜತೆ ಕೂಡಿರುತ್ತದೆ. ಗೋರಕ್ಷಣೆಯು ನನಗೆ ಬಹು ಪ್ರಿಯವಾದುದು. ಗೋವನ್ನು ರಕ್ಷಿಸುವುದು ಈಶ್ವರನ ಇಡೀ ಮೂಕ ಸೃಷ್ಟಿಯನ್ನು ರಕ್ಷಿಸುವುದಾಗಿದೆ. ನನ್ನನ್ನು ಯಾರಾದರೂ 'ಹಿಂದೂಧರ್ಮದ ಮುಖ್ಯವಾದ ಬಾಹ್ಯರೂಪವೇನು?' ಎಂದು ಕೇಳಿದರೆ ನಾನು 'ಗೋರಕ್ಷಣೆ' ಎಂದೇ ಹೇಳುವೆನು. ನಾವು ಈ ಧರ್ಮವನ್ನು ಎತ್ತಿಹಿಡಿದ್ದೇವೆಂದು ನನಗೆ ಹಲವು ವರ್ಷಗಳಿಂದಲೂ ಅನ್ನಿಸುತ್ತದೆ ಗೋರಕ್ಷಣೆ ಮಾಡುವ ಹಿಂದೂ ಇರುವವರೆಗೂ ಹಿಂದೂ ಧರ್ಮವು ಉಳಿಯುವುದು"

"ಹಿಂದೂಸ್ತಾನದಲ್ಲಿ ಮನುಷ್ಯನಿಗೆ ಹಸುವೇ ಜತೆ ಹಾಗೂ ದೊಡ್ಡ ಆಧಾರ ಎಲ್ಲರನ್ನೂ ಪಾಲನ ಮಾಡುವ ಗೋಮಾತೆಯನ್ನು ರಕ್ಷಣೆ ಮಾಡುವದು, ಸೇವೆ ಮಾಡುವದು ಪ್ರತಿಯೊಬ್ಬನ ಕರ್ತವ್ಯವು. ಒಂದೊಂದು ಕ್ಷಣವಾದರೂ ಈ ಕಾರ್ಯಕ್ಕೆ ವ್ಯಯಿಸಬೇಕು"

"ನನಗೆ ಗೋವಧೆಯೂ ಮನುಷ್ಯ ವಧೆಯೂ ಒಂದೇ ಸಮಾನವೆನಿಸುವುದು ನಾನು ಗೋರಕ್ಷಣ ವಿಷಯದಲ್ಲಿ ಎಷ್ಟೆಷ್ಟು ಚಿಂತನ ಮಾಡಿತ್ತೇನೆಯೋ ನನಗೆ ಅದರ ಮಹತ್ವವು ಅಷ್ಟಷ್ಟೂ ಹೆಚ್ಚಾಗಿ ತಿಳಿದು ಬರುತ್ತದೆ ಗೋರಕ್ಷಣೆ ವಿಷಯವು ಅತಿ ಮಹತ್ವದ್ದು ಅದಂತಿರಲಿ ದೇಶದ ಆರ್ಥಿಕ ಸ್ಥಿತಿಯು ಅಡಗಿರುತ್ತದೆ"

ಮಹಾತ್ಮಾ ಗಾಂಧೀಜಿಯವರ ಈ ಉದ್ಗಾರಗಳನ್ನು ರಾಜ್ಯಾಡಳಿತದವರು ಗಮನಿಸಿಬೇಕು ಗೋಸಂರಕ್ಷಣ ಕಾರ್ಯ ಭಂಡಿಂದಲೂ ಉತ್ಸಾಹದಿಂದಲೂ ನಡೆಯಬೇಕು. ಅದರಿಂದಲೇ ಜನತೆಗೆ ಆರ್ಥಿಕ ಹಾಗೂ ಆರೋಗ್ಯದ ಸುಧಾರಣೆಯಾಗುವುದು.

ಭಾರತ ಮತ್ತು ಗೋವಾತೆ

(ಮುಂದುವರಿದುದು)

ನಿಜವಾಗಿ ಎಲ್ಲಿ ಮಾತೃವತ್ ಭಾವನೆಯುಂಟೋ ಅಲ್ಲಿ ಅಪಮಾನಕ್ಕೆ ಕೊಲೆಗೆ ಸಹನೆ ಇಲ್ಲ ; ಗೋತಾಲಕೃಷ್ಣನ ಈ ಭೂಮಿಯಲ್ಲಿ ಗೋಹತ್ಯೆ ಸಹಿಯಾಗಿದೆಯೆಂದರೆ ಅದಕ್ಕಿಂತ ಹೆಚ್ಚಿನ ಅಪಮಾನದ ಸಂಗತಿ ನಮ್ಮ ಜನತೆಗೆ ಮತ್ತು ಸಂಸ್ಕಾರಕ್ಕೆ ಬೇರೆ ಏನಿದೆ ?

ಹಾಗಾದರೆ ಇಂದು ನಮ್ಮ ರಾಷ್ಟ್ರದ ಜನತೆಗೆ ಗೋವಿನ ಬಗ್ಗೆ ಶ್ರದ್ಧೆ ಇಲ್ಲವೇ ? ಹಾಗೆಂದು ಹೇಳುವುದು ಮೂರ್ಖತನವಾದೀತು ಜನರಿಗೆ ಗೋವಿನ ಬಗ್ಗೆ ಶ್ರದ್ಧಾಭಾವನೆ ಏನೋ ಇದೆ ; ಆದರೆ ಅದಕ್ಕಾಗಿ ಪ್ರತ್ಯಕ್ಷ ಕಾರ್ಯ ಮಾಡುವ ಸಾಹಸ ಜಾಗೃತವಾಗಿಲ್ಲ : ಆದರಿಂದಾಗಿ ಅದು ಅಂಧಶ್ರದ್ಧೆಯಂತಾಗಿದೆ ಇಂದೂ ಸಹ ಮನೆಮನೆಗಳಲ್ಲಿ, ಕೇರಿಕೇರಿಗಳಲ್ಲಿ ದೀಪಾವಳಿಯಂದು ಗೋಪೂಜೆ ವೈರವಣಿಗೆ ಇತ್ಯಾದಿಗಳು ಅಖಂಡವಾಗಿ ನಡೆಯುತ್ತಿವೆ ; ಆದರೆ ಅದೇ ರೀತಿ ಗೋಹಂತಕರನ್ನು ಹಿಡಿದು ಬಲಿಹಾಕುವ ಕಾರ್ಯ ಆಗುತ್ತಿಲ್ಲ ; ಕಾರಣವೆಂದರೆ— ಸಂಕಲ್ಪವೇ ಗೋಹತ್ಯೆಗೆ ಪರವಾನಿಗೆ ಇತ್ತಿದೆ ; ಕೆಲವು ಪ್ರಾಂತೀಯ ಸರಕಾರಂಗಳು ಗೋಹತ್ಯೆಯನ್ನು ನಿಷೇಧಿಸಿದ್ದರೂ ಗೋವ್ಯಾಪಾರದ ವಹಿವಾಟಿಗೆ ಕಡಿವಾಣವಿಲ್ಲ : ಆದ್ದರಿಂದ ಇಂದು ಪಾನನಿರೋಧವನ್ನು ಹೇಗೆ ತಡೆಯಲಾಗಿಲ್ಲವೋ ಅದೇ ರೀತಿ ಒಂದೆಡೆ ಗೋಹತ್ಯೆ ನಡೆಯುತ್ತ, ಇತರ ಕಡೆಗಳಲ್ಲಿ ಅದರ ಉಪಯೋಗವಾಗುತ್ತಿದೆ : ಯಾವುದೇ ಶಾಸನದಿಂದಲೇ, ಸಮಾಜದಲ್ಲಿ ಶೀಲನಿರ್ಮಾಣವಾಗಲಾರದು ನಿಜ : ಆದರೆ ಹಂತಕರಿಗೆ ಕಾನೂನಿನ ಭಯವೇ ಇಲ್ಲದಾಗ ನಡೆಯುವಷ್ಟು ಕೊಲೆಗಳು ಕಾನೂನು ಜಾರಿಯಲ್ಲಿದ್ದಾಗ್ಯೆ ನಡೆಯಲಾರದು.

ಜನತೆ ಜಾಗೃತರಾಗಿ ಈ ಕಾರ್ಯದಲ್ಲಿ ಒಂದಾಗಿ ದುಡಿಯಬೇಕಾಗಿದೆ ; ಜನಶಕ್ತಿಯು ಮುಂದೆ ಯಾವ ಮಹಾಶಕ್ತಿಯೂ ಎಟವೂ ನಡೆಯದು ; ' ಸಂಘೇ ಶಕ್ತಿಃ ಕಲೌ ಯುಗೇ ' ಎಂಬುದನ್ನು ಮರೆಯಾಗದು : ಆದ್ದರಿಂದ ಮೊದಲು ಭಾರತದ ಎಲ್ಲಾ ಭಾಗಗಳಲ್ಲಿಯೂ ಈ ಗೋವಧೆಯನ್ನು ನಿಲ್ಲಿಸುವ ಕಾರ್ಯದಲ್ಲಿ ಪ್ರತಿಯೊಬ್ಬ ಗೋಭಕ್ತನೂ ಕೈಗೂಡಿಸಬೇಕು : ಈ ಕಾರ್ಯ ಯಾವ ಒಂದು ನಿರ್ದಿಷ್ಟ ಸಂಘಸಂಸ್ಥೆಗಳ ಮೂಲಕವೇ ನಡೆಯಬೇಕೆಂದಿಲ್ಲ ; ಅಥವಾ ಯಾವುದೇ ಸಂಸ್ಥೆಯವರು ಮಾಡುತ್ತಿದ್ದರೂ ಅದಂಲ್ಲಿ ಎಲ್ಲರೂ ಒಂದಾಗುವುದು ಅವಶ್ಯಕ ; ಕಾರಣ— ಗೋವಂಶದ ರಕ್ಷಣೆ ಯಾವ ಖಾಸಗೀ ವಿಷಯವೂ ಅಲ್ಲ ; ಇಡೀ ಭಾರತದ ಮಾನಬಿಂದು, ಜನತೆಯ ಬೆನ್ನೆಲುಬು, ವಾತ್ಸಲ್ಯಮಯಿಯಾಮತೆಯು, ಸ್ವರಾಜ್ಯದಲ್ಲಿರುವ ಈ ಗೋವಮಾತೆಯು, ಗೋವಂಶದ ಬಗ್ಗೆ, ಭಾರತೀಯ ರಾಷ್ಟ್ರೀಯತ್ವದ ಬಗ್ಗೆ, ಹಿಂದೂಧರ್ಮದ ಬಗ್ಗೆ ಶ್ರದ್ಧೆ ಇರುವ ಪ್ರತಿಯೊಬ್ಬ ವ್ಯಕ್ತಿಯೂ (ಹಿಂದೂ ಮುಸ್ಲಿಂ ಯಾ ಕ್ರೈಸ್ತ) ಈ ಕಾರ್ಯದಲ್ಲಿ ಒಂದಾಗಿ ವಿಧಾಯಕ ರೀತ್ಯ ಇಡೀ ರಾಷ್ಟ್ರದಲ್ಲಿ, ದೇಶದಲ್ಲಿ ನಡೆಯುತ್ತಿರುವ ಗೋಹತ್ಯೆಯನ್ನು ಪ್ರತಿಭಟಿಸಿ ನಿಲ್ಲಿಸುವ ಕಾರ್ಯದಲ್ಲಿ ಒಂದಾಗಲೀ, ಆಗಲೇ ಭಾರತವು ವಿಶ್ವಗುರು ಭಾರತವಾದೀತು, ಸತ್ಯಕಾವ ಲೆ ಎಂಬ ಹೆಸರು ಸಾರ್ಥಕವಾದೀತು, ನಿಜವಾದ ' ರಾವ.ರಾಜ್ಯ - ಧರ್ಮರಾಜ್ಯ ' ವೆನಿಸಿಕೊಂಡು ಬೆಳಗೀತು. (ಧರ್ಮಬೋಧ)

ಉತ್ತಮ ತಳಿ ಗೋವುಗಳ ಸಂವರ್ಧನೆಗಾಗಿ

ಸನದೆಹಲಿ ೭— ಉತ್ತಮ ತಳಿಗಳ ಗೋವುಗಳ ಸಂವರ್ಧನೆಗೆ ಸಂಬಂಧಿಸಿದಂತೆ ಶ್ರಮಗಳನ್ನು ಸೂಚಿಸುವಂತೆ ಕೇಂದ್ರ ಗೋಸಂವರ್ಧನಾ ಪರಿಷತ್ತು ರಚಿಸಿದ್ದ ವಿಶೇಷ ಸಮಿತಿಯು ಪಶು ಮತ್ತು ಹೈನುಗಾರಿಕೆ ಸುಧಾರಣಾ ಕಾನೂನೊಂದನ್ನು ರಚಿಸಬೇಕೆಂದು ಭಾರತ ಸರಕಾರಕ್ಕೆ ಶಿಫಾರಸು ಮಾಡಿದೆ — ಅಧಿಕ ಪ್ರಮಾಣದ ಹಾಲನ್ನು ಕೊಡುವ ಉತ್ತಮ ತಳಿಗಳ ಗೋವುಗಳನ್ನು ಸಂರಕ್ಷಿಸಿಕೊಂಡು ಬರುವುದು ಈ ಶಾಸನದ ಗುರಿಗಳಲ್ಲಿ ಒಂದಾಗಿದೆ — ಉತ್ತಮ ತಳಿ ಗೋವುಗಳನ್ನು ರಫ್ತುಮಾಡುವ ಹಾಗೂ ಅವುದುಮಾಡಿಕೊಳ್ಳುವ ರಾಜ್ಯಗಳ ಅಭಿಪ್ರಾಯಗಳನ್ನು ಪಡೆದು ಕೇಂದ್ರ ಸರಕಾರವು ಶಾಸನ ರಚಿಸುವುದು — ಗೋಸಂವರ್ಧನೆ ಸಂಬಂಧವಾದ ಕಾರ್ಯಯೋಜನೆಗಳನ್ನು ರಾಜ್ಯಯೋಜನೆಗಳಲ್ಲಿ ಸೇರಿಸಿಕೊಳ್ಳಬೇಕೆಂದೂ ಸಮಿತಿ ಸೂಚಿಸಿದೆ.

ವುಡ್‌ಲ್ಯಾಂಡ್ಸ್ ಚಿತ್ರಮಂದಿರ ಇಂದಿನಿಂದ 12 ನೇ ವಾರ

ಒಂದು ಲಕ್ಷಕ್ಕೂ ಹೆಚ್ಚು ಮಂದಿ ನೋಡಿ ಆನಂದಿಸುವ ಅತ್ಯುತ್ತಮ ಚಿತ್ರ

ಜಂಗ್ಲಿ (ಹಿಂದಿ) Junglee

ನಟವರ್ಗ— ಶಮ್ಮಿ ಕಪೂರ್, ಸೈರಾ ಬಾನು, ಲಲಿತಾ ಪವಾರ್, ಹೆಲೆನ್

ಸಂಗೀತ— ಶಂಕರ್-ಜೈಕಿಶನ್ [ದಿನವಹಿ 3 ಪ್ರದರ್ಶನಗಳು]

ಅಪೆರಾ— ಜನಭರಿತ 2 ನೇ ವಾರ

ಸಂಪೂರ್ಣ ರಾಮಾಯಣ

- ಕನ್ನಡ -

[ಪೂರ್ಣ ವರ್ಣರಂಜಿತ ಚಿತ್ರ] [ದಿನವಹಿ 3 ಆಟಗಳು]

SHAKTI SUDHA

A Superb Tonic

For Quality Printing

L. N. Press

Sivarampet, Mysore

ಎಲ್ಲ ವಿಧದ ಆಯುರ್ವೇದ ಔಷಧಗಳಿಗೆ

ಅ ಶೋ ಕಾ ಫಾರ್ಮಸಿ

ಲ್ಯಾನ್ಸ್‌ಡೌನ್ ಬಜಾರ್ ಮೈಸೂರು

ಗೋರಕ್ಷಣ ಹಾರ್ದಿಕವಾಗಿ ಕಾರ್ಯಗಳು ಹೆಚ್ಚಿಚ್ಚಾಗಿ ನಡೆಯಲಿ



Edited, Printed & Published by the Proprietor, Dharma Prachara Nirata M. S. Krishna Rao. at the Satyavadi Press Chamarajapuram, Mysore 4.